ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	173
ಸದಸ್ಯರ ಹೆಸರು	ಶ್ರೀ ಪ್ರಾಣೇಶ್ ಎಂ.ಕೆ
ವಿಷಯ	ಅಂತ್ಯ ಸಂಸ್ಕಾರ ಪರಿಹಾರ ಭತ್ಯೆ ಕುರಿತು
ಉತ್ತರಿಸಬೇಕಾದ ದಿನಾಂಕ	17.07.2019
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಪ್ರಶ್ನೆ	ಉತ್ತರ
ಅ) ಬಿ.ಪಿ.ಎಲ್ ಕುಟುಂಬದವರಿಗೆ ಸರ್ಕಾರದಿಂದ ನೀಡಲಾಗುವ ಅಂತ್ಯ ಸಂಸ್ಕಾರ ಪರಿಹಾರ ಭತ್ಯೆಯನ್ನು ನೀಡಲು ಇರುವ ಕಾಲಮಿತಿಯೇನು?	ಅಂತ್ಯ ಸಂಸ್ಕಾರ ಸಹಾಯಧನ ಸೌಲಭ್ಯಕ್ಕಾಗಿ ನಾಡಕಛೇರಿಯಲ್ಲಿ ಅರ್ಜಿ ಸಲ್ಲಿಸಿದ 48 ಗಂಟೆಯೊಳಗಾಗಿ ಉಪ ತಹಶೀಲ್ದಾರರು ಪರಿಶೀಲಿಸಿ ಅನುಮೋದನೆ ನೀಡಬೇಕು. ಅರ್ಜಿ ಅನುಮೋದನೆಗೊಂಡ ನಂತರ ಮುಂದಿನ 3 ದಿನಗಳೊಳಗೆ ತಹಶೀಲ್ದಾರರು ಸಹಾಯಧನವನ್ನು ಪಾವತಿಸಲು ಕ್ರಮವಹಿಸಬೇಕಾಗಿರುತ್ತದೆ.
ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಂತ್ಯ ಸಂಸ್ಕಾರ ಪರಿಹಾರ ಭತ್ಯೆ ಕೋರಿ ಸಲ್ಲಿಸಿರುವ ಅರ್ಜಿಗಳಲ್ಲಿ ನವೆಂಬರ್-2015ನೇ ಇಸವಿಯಿಂದೀಚೆಗೆ ಸಲ್ಲಿಸಿರುವ ಅರ್ಜಿದಾರರಿಗೆ ಅಂತ್ಯ ಸಂಸ್ಕಾರ ಪರಿಹಾರ ಭತ್ಯೆ ದೊರಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ, ಅರ್ಜಿಗಳು ಬಾಕಿ ಉಳಿಯಲು ಕಾರಣಗಳೇನು?	2015ನೇ ಸಾಲಿನಲ್ಲಿ ಅಂತ್ಯಸಂಸ್ಕಾರ ಯೋಜನೆಯಡಿ ನೀಡಲಾಗುತ್ತಿದ್ದ ಸಹಾಯಧನ ಮೊತ್ತವನ್ನು ರೂ.1000/-ಗಳಿಂದ ರೂ.5000/-ಗಳಿಗೆ ಹೆಚ್ಚಿಸಿ ಆದೇಶಿಸಿರುವ ಹಿನ್ನಲೆಯಲ್ಲಿ ಅತಿ ಹೆಚ್ಚು ಅರ್ಜಿಗಳು ಸ್ವೀಕೃತವಾಗುತ್ತಿರುವುದರಿಂದ 2446 ಅರ್ಜಿಗಳು ಬಾಕಿ ಉಳಿದಿರುತ್ತದೆ.
ಇ) ಬಾಕಿ ಇರುವ ಅರ್ಜಿಗಳಿಗೆ ಪರಿಹಾರ ದೊರಕಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)	ಬಾಕಿಯಿರುವ ಪ್ರಕರಣಗಳಿಗೆ ಸೌಲಭ್ಯ ವಿತರಿಸಲು ಅವಶ್ಯವಿರುವ ಅನುದಾನಕ್ಕೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ 2019-20ನೇ ಸಾಲಿನಲ್ಲಿ ರೂ. 72.74 ಕೋಟಿ ಹೆಚ್ಚಿನ ಅನುದಾನ ಹಂಚಿಕೆಯಾಗಿದ್ದು, ಬಾಕಿ ಇರುವ ಎಲ್ಲಾ ಅರ್ಜಿಗಳನ್ನು ಆದ್ಯತೆ ಮೇರೆಗೆ ಇತ್ಯರ್ಥ ಪಡಿಸಲಾಗುವುದು. ಈ ಯೋಜನೆಯ ಅನುಷ್ಠಾನಕ್ಕಾಗಿ ಚಿಕ್ಕಮಗಳೂರು ಜಿಲ್ಲೆಗೆ 2019-20 ನೇ ಸಾಲಿನಲ್ಲಿ ರೂ. 60.40 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದ್ದು, ಜೂನ್ 2019 ಅಂತ್ಯಕ್ಕೆ 857 ಅರ್ಜಿಗಳಿಗೆ ಸಹಾಯಧನವನ್ನು ವಿತರಿಸಲಾಗಿದೆ. ಜಿಲ್ಲಾಧಿಕಾರಿಗಳಿಗೆ ಈ ಯೋಜನೆಯಡಿ ಬಾಕಿ ಇರುವ ಅರ್ಜಿಗಳಿಗೆ ಪರಿಹಾರ ನೀಡಲು ಅನುದಾನವನ್ನು ಕೂಡಲೇ ಬಳಕೆ ಮಾಡಿಕೊಳ್ಳುವ ಕುರಿತು ಸೂಚನೆ ನೀಡಲಾಗಿದೆ.

ಆರ್.ಡಿ. 263 ಡಿ.ಎಸ್.ಪಿ 2019

(ಆರ್.ವಿ. ದೇಶಪಾಂಡೆ)
ಕಂದಾಯ ಸಚಿವರು